ಬಹುತೇಕ ಮರೆತೇಹೋಗಿದ್ದ ಹಳೆಯ ಬೈಕನ್ನು ಮರುದಿನವೇ ದೂಳು ಕೊಡವಿ ಸಿದ್ಧಪಡಿಸಿದ. ಅವನು ಸಾಗುವ ದಾರಿಯಲ್ಲಿ ಮೊದಲು ಗಮನಿಸದ ಮರಗಳ ಛಾವಣಿ, ರಸ್ತೆಬದಿಯ ಗೋಡೆಗಳ ಮೇಲೆ ಪಾನ್ ಕಲೆಗಳು, ಪಕ್ಕದಲ್ಲೇ ಬುಳಬುಳನೆ ಹರಿದಾಡುವ ಇಲಿಗಳು, ಇವೆಲ್ಲಾ ಎದ್ದುಬಂದು ದೃಷ್ಟಿಪಥದಲ್ಲಿ ಕಂಡು, ತಾನು ಬಲ್ಲೆನೆಂದು ತಿಳಿದಿದ್ದ ಊರು ವಿಸ್ತರಣೆಯಾಯಿತು. ಮುಂಬಯಿಯ ಜನಸಂದಣಿಯ ಅದೇ ಟ್ರೈನಿನ ಅದೇ ಸೀಟು ಹಿಡಿಯುವ ಎಲ್ಲರ ನಿತ್ಯದ ಸಾಹಸದ ನಡುವೆ ಕಳೆದುಹೋಗಿದ್ದ ಖಾಲಿತನವೊಂದು ಎದ್ದು ಬಂದು ರೈಲುಹಳಿಗಳನ್ನೂ ಸ್ಟೇಷನ್ನುಗಳನ್ನೂ ಹೊದ್ದುಕೊಂಡಿತು. ಕರ್ಮಭೂಮಿಯಲ್ಲಿ ಮರೆಯಾಗಿಹೋಗಿದ್ದ ಅನಾರೋಗ್ಯದ ಮತ್ತು ಸಾವಿನ ಸಾಧ್ಯತೆ ಧುತ್ತೆಂದು ಎಚ್ಚರವಾಗಿ ಬಂದು, ಬ್ಯಾಂಕಿಗೆ ಲಗ್ಗೆಯಿಡುತ್ತಿದ್ದ ಜನರ ಗುಂಪು ಸಪೂರವಾಗಿಬಿಟ್ಟಿತು. ಸಿಬ್ಬಂದಿಯೂ ವಾರಕ್ಕೆ ಎರಡು ದಿನ ಕೆಲಸಕ್ಕೆ ಹೋದರೆ ಸಾಕು ಎಂದಾಯಿತು. ಮಹಾನಗರದಲ್ಲಿ ಮತ್ತೊಬ್ಬರ ಭುಜತಾಕದೆ ನಡೆಯಲೂ ಅಸಾಧ್ಯವಾಗಿದ್ದ ಬೀದಿಗಳಲ್ಲೂ ರಾಜೇಶ ಕೈಬೀಸಿ ನಡೆಯಲಾರಂಭಿಸಿದ. ಹೀಗೆ ಸೈಡ್‌ವಿಂಗಿನಲ್ಲಿ ಬಿಸುಟಿದ್ದ ಬೇಡದ ಸಂಗತಿಗಳೆಲ್ಲಾ ವೇದಿಕೆಯ ಮುಂಭಾಗಕ್ಕೆ ಬಂದು ವಿಜೃಂಭಿಸುವುದನ್ನು ತನ್ನ ಸ್ವಾರ್ಥಕ್ಕಾಗಿ ಸ್ವಾಗತಿಸಿದ್ದ ರಾಜೇಶ; ಅವನು ಅವಾಕ್ಕಾಗಿದ್ದು ಹಲ್ಲಿಯೊಂದರ ರೂಪದಲ್ಲಿ ತನ್ನ ಮನೆಯಲ್ಲಿಯೇ ಬಾಧಿಸಿದಾಗ ಮಾತ್ರ.

ಬಹುಶಃ ಮನೆ ವಿಶಾಲವಾಗಿದ್ದರೆ ಹಲ್ಲಿಯ ಇರುವೂ ತಿಳಿಯದಂತೆ ಇರಬಹುದಿತ್ತೇನೋ ಎಂದು ರಾಜೇಶ ಯೋಚಿಸಿದ್ದಿದೆ. ನಾಲ್ಕು ತಿಂಗಳ ಹಿಂದೆ ಮುಂಬಯಿಗೆ ಬಂದಾಗ, ಬಾಡಿಗೆ ಫ್ಲ್ಯಾಟಿಗಾಗಿ ರಾಜೇಶ ಕುರ್ಲಾದಲ್ಲಿದ್ದ ತನ್ನ ಬ್ರಾಂಚಿನ ಸಮೀಪವೇ ಹುಡುಕಾಡಿದ್ದ. ಲೋಕಲ್ ರೈಲಿನಿಂದ ಜನ ದೊಪದೊಪನೆ ಉದುರುವುದನ್ನು ವಾಟ್ಸ್ಆ್ಯಪ್ ವಿಡಿಯೊಗಳಲ್ಲಿ ನೋಡಿ ಹೆದರಿಹೋಗಿದ್ದವನು, ರೈಲು ಹತ್ತುವ ಅಗತ್ಯವೇ ಬೀಳದಂತೆ ಬ್ರಾಂಚಿನಿಂದ ಮೂರೂವರೆ ಕಿಲೊಮೀಟರ್ ದೂರದಲ್ಲಿರುವ ಅಪಾರ್ಟ್‌ಮೆಂಟ್ ಕಂಡುಕೊಂಡ. ಅದನ್ನು ಬೆಂಗಳೂರು ಭಾಷೆಯಲ್ಲಿ ಅಪಾರ್ಟ್‌ಮೆಂಟ್ ಎನ್ನುವುದಕ್ಕಿಂತ ಹೌಸಿಂಗ್ ಸೊಸೈಟಿಯನ್ನು ತುಂಡು ಮಾಡಿ ಮುಂಬಯಿ ಪರಿಭಾಷೆಯಲ್ಲಿ 'ಸೊಸೈಟಿ' ಎಂದು ಸಂಬೋಧಿಸುವುದೇ ರಾಜೇಶನಿಗೂ ಸೂಕ್ತವಾಗಿತ್ತು. ಅವನು ಇಲ್ಲಿಯವರೆಗೆ ತಿಳಿದಿದ್ದ ಸೊಸೈಟಿಯಾದರೋ ಒಂದು ಅಮೂರ್ತ ಪರಿಕಲ್ಪನೆಯಾಗಿತ್ತು. ಆದರೆ, ಆ ಅಗೋಚರ ಸೊಸೈಟಿ ಅಥವಾ ಸಮಾಜದಂತೆಯೇ ಈ ಸೊಸೈಟಿ ಕೂಡ ಹೊರಗಿನಿಂದ ಕ್ರೂರವಾಗಿದ್ದು ಒಳಗೆ ಬೆಚ್ಚಗಿತ್ತು. ಈ ಸೊಸೈಟಿಯ ರೂಪ ಒಂದೇ ವಿಶಾಲ ಅಂಗಳದಲ್ಲಿ ಹಲವಾರು ಬ್ಲಾಕ್‌ಗಳಿಂದ ಕೂಡಿದ್ದು, ಒಂದೊಂದು ಬ್ಲಾಕ್‌ನಲ್ಲಿಯೂ ಸುಮಾರು ಇಪ್ಪತ್ತು ಮಹಡಿಗಳಿದ್ದ ಎರಡು ಮೂರು ಕಟ್ಟಡಗಳಿದ್ದವು. ಮೂರ್ನಾಲ್ಕು ದಶಕಗಳಷ್ಟು ವಯಸ್ಸಾದ ಈ ಕಟ್ಟಡಗಳೆಲ್ಲವೂ ಪಾಚಿ ಬಣ್ಣಕ್ಕೆ ತಿರುಗಿ, ತನ್ನ ರೂಪ ಆಕಾರಗಳ ಬಗ್ಗೆ ಉದಾಸೀನವಾಗಿದ್ದ ಮಹಾನಗರದ್ದೇ ಪ್ರತೀಕವಾಗಿದ್ದವು. ಒಂದೊಂದು ಕಟ್ಟಡದ ಪ್ರತಿ ಮಹಡಿಯಲ್ಲಿಯೂ ಆರೋ ಎಂಟೋ ಪುಟ್ಟ ಫ್ಲ್ಯಾಟ್‌ಗಳು. ಈ ಫ್ಲ್ಯಾಟ್‌ಗಳಿಂದ ಅವುಗಳ ಏಸಿ ಮೆಷಿನ್‌ಗಳು ಕಿಟಕಿಯಿಂದ ಆಚೆಬಂದು ಕೂತು, ಆಯಾ ಕಟ್ಟಡದ ಮೈಮೇಲೆ ನೂರಾರು ಉಬ್ಬುಗಳಂತೆ ತೋರುತ್ತಿದ್ದವು.

ಒಂದು ಮೂರ್ತ ಹೆಸರಿನ ಹಂಗೂ ಇಲ್ಲದೆ ಬಿಲ್ಡಿಂಗ್ ನಂಬರ್ 92 ಎಂದು ಕರೆಸಿಕೊಳ್ಳುತ್ತಿದ್ದ ಇಂತಹ ಕಟ್ಟಡದ ಐದನೆಯ ಮಹಡಿಯಲ್ಲಿದ್ದ ಒಂದೇ ರೂಮಿನ ಪುಟ್ಟ ಫ್ಲ್ಯಾಟನ್ನು ರಾಜೇಶ ಇಪ್ಪತ್ತೊಂದು ಸಾವಿರ ರೂಪಾಯಿಗಳಿಗೆ ಬಾಡಿಗೆಗೆ ಪಡೆದಿದ್ದ. ಬಾಗಿಲು ತೆಗೆದರೆ ಆರು ಹೆಜ್ಜೆಗೆ ಮುಗಿದುಹೋಗುವ ಹಾಲ್ ಅಥವಾ ಲಿವಿಂಗ್ ರೂಮು, ಅದರ ಎಡಕ್ಕೆ ಒಬ್ಬರು ಮಾತ್ರ ನಿಲ್ಲಬಹುದಾದ ಅಡಿಗೆಮನೆ ದಾಟಿದರೆ ಸ್ವಲ್ಪ ದೊಡ್ಡದಾದ ಬೆಡ್‌ರೂಮು ಮತ್ತು ಅಂಟಿಕೊಂಡ ಬಾತ್‌ರೂಮು. ಲಿವಿಂಗ್ ರೂಮಿಗೆ ಬಾಲ್ಕನಿ ಇತ್ತಾದರೂ ಅದು ಒಂದು ಕೋಲಿನಷ್ಟಿದ್ದು, ಒಗೆದ